**ಒಂಬತ್ತನೇ ಶತಮಾನದಲ್ಲಿಯೇ ಬೆಂಗಳೂರು ಇತ್ತು ಎನ್ನುವುದಕ್ಕೆ ಸ್ಪಷ್ಟವಾದ ಶಾಸನಾಧಾರ ಇದೆ ನಮ್ಮಲ್ಲಿ. ಆದರೆ ಧರ್ಮ, ಮತ, ಜಾತ್ಯಾಧಾರಿತವಾಗಿ ಯೋಚಿಸಿ ಹಾಗಿರುವುದಕ್ಕೆ ಸಾಧ್ಯವೇ ಇಲ್ಲ ಎಂದು ವಾದ ಮಾಡಿದರೆ ಏನು ಹೇಳುವುದು?**

ಪಾಲಕಾವ್ಯ ಯಾರು ಅಂತ ತಿಳಿದುಕೊಳ್ಳಬೇಕಾಗುತ್ತದೆ. ಪಾಲಕಾವ್ಯ ಗಜಶಾಸ್ತ್ರ ಬರೆದ ಮಹಾನ್ ಋಷಿಗಳಲ್ಲಿ ಒಬ್ಬ. ಇದನ್ನು ಅರ್ಥ ಮಾಡಿಕೊಳ್ಳದೆ 'ಸಾಕ್ಷಾತ್ ಕರೇಣಾತ್ಮಜಃ' ಎಂಬ ಶಬ್ದವನ್ನು ಅಕ್ಷರಾಶಃ ಅರ್ಥ ಮಾಡಿಕೊಂಡು ಕರೇಣ ಅಂದ್ರೆ ಆನೆ; ಆನೆಯ ಮಗ ಎಂದು ಅರ್ಥ ಬರೆದರೆ ಹೇಗೆ ಸರಿಯಾಗುತ್ತದೆ?

ಈಗ ನಾವು ಬಳಸ್ತಾ ಇರೋದು ಪಾಶ್ಚಾತ್ಯ ಆಧಾರಿತ ಭಾರತೀಯ ಕಾಲಗಣನೆ. ನಮ್ಮ ಭಾರತದ್ದೇ ಕಾಲಗಣನೆಯನ್ನು ನಾವೀಗ ಬಳಸುತ್ತಲೇ ಇಲ್ಲ. ನಮ್ಮಲ್ಲಿ ಒಬ್ಬ ದೊಡ್ಡ ವಿದ್ವಾಂಸರಾದ ಸ್ವಾಮಿ ಕಣ್ಣುಪಿಳ್ಳೆ ಎನ್ನುವವರು ಒಂದು ಪುಸ್ತಕ ಬರೆದಿದ್ದಾರೆ. ಎಲ್ಲರೂ ಅದನ್ನೇ ಅವಲಂಬಿಸುತ್ತಿದ್ದಾರೆ. ಅದು ತಪ್ಪಲ್ಲ. ಆದರೆ ಹಾಗೆ ಅವಲಂಬಿಸುವ ಮೊದಲು ಅದರಲ್ಲಿರುವ ಲೋಪದೋಷಗಳನ್ನು ಗಮನಿಸಬೇಕಲ್ಲವೇ? ಅದನ್ನಿಟ್ಟುಕೊಂಡು ನಮ್ಮ ಶಾಸನಗಳ ಕಾಲಮಾನ ಹೊಂದುತ್ತಿಲ್ಲ ಎಂದರೆ ಹೇಗೆ? ಅವುಗಳನ್ನೇ ನಾನು ಲೆಕ್ಕಾಚಾರ ಹಾಕಿದಾಗ ಎಷ್ಟೋ ಕಡೆ ಸರಿಯಾಗಿ ಹೊಂದಿವೆ. ನೇತ್ರ ಶಬ್ದವನ್ನು ಸಂಖ್ಯಾಶಬ್ದ ಎಂದು ಕರೆಯುತ್ತೇವೆ ಶಾಸನಶಾಸ್ತ್ರದಲ್ಲಿ. ನೇತ್ರ ಎಂದರೆ ಎರಡು ಎಂದು ಅರ್ಥ ಮಾಡಿಕೊಳ್ಳುತ್ತೇವೆ. ಆದರೆ ಎಷ್ಟೋ ಸಲ ಸಂದರ್ಭ ಹೊಂದುವುದಿಲ್ಲ. ಕಾಲಗಣನೆಯೇ ತಪ್ಪಾಗುತ್ತಿತ್ತು. ನಮ್ಮಲ್ಲಿ ಈಶ್ವರ ತ್ರಿನೇತ್ರ ಅಲ್ಲವೇ? ಹಾಗಾಗಿ ನೇತ್ರ ಎಂದರೆ ಮೂರು ಎಂದು ಯಾಕೆ ತೆಗೆದುಕೊಂಡು ನೋಡಬಾರದು? ಹೀಗೆ ಒಂದಕ್ಕೊಂದು ಪೂರಕವಾಗಿರುವ ಹಲವು ಕ್ಷೇತ್ರಗಳಲ್ಲಿ ಅಧ್ಯಯನ ಮಾಡುವುದಕ್ಕೆ ಶುರುಮಾಡಿದೆ. ಈಗಲೂ ಅದೇ ರೀತಿ ಅಧ್ಯಯನ ಮಾಡುತ್ತಿದ್ದೇನೆ.

◆ ಇಂದಿನ ಕನ್ನಡದ ಸಂಶೋಧನಾ ಕ್ಷೇತ್ರದ ಪರಿಸ್ಥಿತಿ ಹೇಗಿದೆ?

ಇಂದಿನ ಸಂಶೋಧನಾ ಕ್ಷೇತ್ರದಲ್ಲಿ ಸಂಶೋಧನೆಗಳು ನಡೆಯುತ್ತಿರುವ ರೀತಿಗೆ ನಮ್ಮ ಭಾರತೀಯ ಶಿಕ್ಷಣ ಪದ್ಧತಿ ಎಂದು ಇಂದು ಯಾವುದು ಇದೆಯೋ ಅದೇ ಮೂಲಕಾರಣ. ನಾವು ಓದುವಾಗ ಮನಸ್ಸಿಗೆ ನಾಟುವ ಹಾಗೆ ಪಾಠ ಮಾಡುವ ಅಧ್ಯಾಪಕರಿದ್ದರು. ಪಠ್ಯಪುಸ್ತಕಗಳೂ ಚೆನ್ನಾಗಿತ್ತು. ಈಗ ಹಾಗಿಲ್ಲ. ಮೂಲ ಆಕರಗಳೇ ಸರಿಯಾಗಿ ಇಲ್ಲದೆ ಇದ್ದಾಗ ಯಾರಿಗೆ ತಾನೇ ಅದು ಮನಸ್ಸಿಗೆ ನಾಟುತ್ತದೆ?

ವಿಷಾದದಿಂದಲೇ ಹೇಳಬೇಕು. ನಮ್ಮಲ್ಲಿ ಜಾತಿ, ಧರ್ಮಾಧಾರಿತ ಅಧ್ಯಯನಗಳು ಯಾವತ್ತು ಆರಂಭವಾಯಿತೋ ಅದರಿಂದ ತೊಂದರೆಯೇ ಆಗಿದೆ. ಒಂಬತ್ತನೇ ಶತಮಾನದಲ್ಲಿಯೇ ಬೆಂಗಳೂರು ಇತ್ತು ಎನ್ನುವುದಕ್ಕೆ ಸ್ಪಷ್ಟವಾದ ಶಾಸನಾಧಾರ ಇದೆ ನಮ್ಮಲ್ಲಿ. ಆದರೆ ಧರ್ಮ, ಮತ, ಜಾತ್ಯಾಧಾರಿತವಾಗಿ ಯೋಚಿಸಿ ಹಾಗಿರುವುದಕ್ಕೆ ಸಾಧ್ಯವೇ ಇಲ್ಲ ಎಂದು ವಾದ ಮಾಡಿದರೆ ಏನು ಹೇಳುವುದು? ಈ ದೃಷ್ಟಿಗಳಿಂದ ಸಂಶೋಧನಾ ಕ್ಷೇತ್ರ ಈಗ ಮೊದಲಿನ ಥರ ಇಲ್ಲ.

ಭಾಷೆ–ಸಾಹಿತ್ಯಗಳ ಅಧ್ಯಯನ, ಉಭಯಭಾಷಾ ಪ್ರಭುತ್ವಗಳು ಈಗ ಸ್ವಲ್ಪ